ಬರುತ್ತಿದ್ದ ಬೆಂಕಿಯ ಝಳ.. ನಾನೆಲ್ಲಿದ್ದೇನೆ ಎನ್ನುವ ಎಚ್ಚರ ತಪ್ಪುವ ಹಾಗೆ ಆದಾಗ ಕಣ್ಣುಮುಚ್ಚಿ ಆಧರಿಸಿಕೊಂಡೆ. ಹೊರಡುತ್ತಿರುವ ನಮ್ಮ ಕಾರಿನ ಕಡೆಗೆ ಆಸೆಯಿಂದಲೂ, ಅಸೂಯೆಯಿಂದಲೂ ನೆಟ್ಟ ಕಣ್ಣುಗಳ ಚೂಪು ಅನುಭವಕ್ಕೆ ಬರುತ್ತಿತ್ತು. ಕಾರು ತಕ್ಷಣ ಹೊರಡಲಿಲ್ಲ; ಇನ್ನೂ ಕೆಲವರನ್ನು ಹತ್ತಿಸಿಕೊಳ್ಳಲು ಕಾಯುತ್ತಿದ್ದಾನೆನಿಸಿ, ಮತ್ತೆ ಸ್ವಲ್ಪ ಗಟ್ಟಿದನಿಯಲ್ಲಿ 'ಹೋಗಿಬಿಡೋಣ' ಎಂದೆ. ಮೆಲ್ಲಮೆಲ್ಲಗೆ ಹಾವು ಸರಿದಂತೆ ಕಾರು ಹೊರಟೇ ಬಿಟ್ಟಿತು.

* * *

'ಅಜ್ಜೀ..., ಅಜ್ಜೀ ...'

ಅದು ಹೊರಗಿನ ದನಿಯೋ, ಒಳಗಿನ ದನಿಯೋ ತಿಳಿಯದೆ ಬೆಚ್ಚಿ ಕಣ್ಣು ತೆರೆದೆ. ನಾವು ಆಗಲೇ ದೂರ ಬಂದಿರಬೇಕೆಂದನಿಸಿತು. ಕಾರಿನೊಳಗಿನ ಮಂದ ಬೆಳಕಿನಲ್ಲಿ ಡ್ರೈವರನ ಮುಖ ಕಾಣಿಸಿತು. ಅವನ ಮುಖದಲ್ಲಿ ಸಣ್ಣ ನಗುವನ್ನು ಕಂಡು ಸ್ವಲ್ಪ ನೆಮ್ಮದಿಯಾಯಿತು. ಹಾಗಾದರೆ ಆಗಲೇ ನಾವು ಬೆಂಕಿಯ ಬಲೆಯಿಂದ ನುಣುಚಿಕೊಂಡು ನಮ್ಮ ಗುರಿ ತಲುಪಿಯೇ ಬಿಟ್ಟೆವೆ?

'ಇಷ್ಟು ಬೇಗ ಬಂತೆ?' ಎಂದು ಕೇಳಿದೆ.

'ಇನ್ನೂ ಇಲ್ಲ. ಸುಮ್ಮನೆ ಕರೆದೆ. ನಿದ್ದೆ ಬಂದಿತ್ತೇನೋ!' ಎಂದ. ಅವನ ದನಿಯಲ್ಲಿ ನಿರಾಳತೆಯಿತ್ತು. ನಾನು ಶಾಶ್ವತವಾಗಿ ಕಣ್ಣು ಮುಚ್ಚಿದೆ ಎಂದುಕೊಂಡನೇನೋ ಬಡವಾ ಎಂದು ಸ್ವಲ್ಪ ಸಿಟ್ಟು ಬಂತು.

'ಬೇಕೆಂದಾಗ ನಿದ್ದೆ ಬರುವುದಿಲ್ಲ, ಸಾವೂ ಬರುವುದಿಲ್ಲ' ಎಂದೆ.

ನನ್ನ ದನಿಯಲ್ಲಿನ ಕಠೋರತೆಯನ್ನು ಕಂಡು ಅವ ಬೆಚ್ಚಿರಬೇಕು. ಅವನನ್ನು ಕುಟುಕಲೆಂದೇ ಹೇಳಿದ ಮಾತದು. ನಿದ್ದೆ ಬಾರದೇ ಗೋಳಾಡುವ, ಸಾವನ್ನು ನಿರೀಕ್ಷಿಸುವಂತಹ ಅಸಹಾಯಕಳು ನಾನೆಂದೂ ಆಗಿರಲಿಲ್ಲ. ಇದ್ದ ಸಕಲ ಸವಲತ್ತುಗಳನ್ನು ಕಡೆಗಣಿಸಿ ಸ್ವತಂತ್ರವಾಗಿ ಬದುಕಬಂದವಳಿಗೆ ಸಾವೂ ಸುಲಭದಲ್ಲಿ ಹೆದರಿಸಲಾರದು, ಹೆದರಿಸಬಾರದು. ಆದರೂ ಗಾಳಿಯಲ್ಲಿನ ಆ ಬಿಸಿ; ಆ ನಿಟ್ಟುಸಿರುಗಳು, ಆ ಅಸಹಾಯಕ ನೋಟಗಳು...

'ಹಾಗೇಕಂತೀರಿ ಅಜ್ಜಿ, ಬಿಡ್ತು ಅನ್ನಿ. ಒಳ್ಳೆಯ ಮಾತು ಹೇಳಿ.'

ಅವನ ದನಿಯಲ್ಲಿಯೂ ಹೇಳಲಾರದ ಭಯ. ಯಾರನ್ನಾದರೂ ಹೆದರಿಸಬಲ್ಲ ಬೆಂಕಿಯ ನೋಟವದು. ಪಾಪದ ಹುಡುಗನೇ ಇರಬೇಕೆಂದುಕೊಂಡು ಸುಮ್ಮನಾದೆ. ಮೇಲಾಗಿ ಅಷ್ಟು ಹೊತ್ತಿಗೆ ನನ್ನಲ್ಲಿ ಮಾತಾಡಲು ಏನೂ ಇರಲಿಲ್ಲ. ಅವನೂ ಸಹ ಮಾತು ಬೆಳೆಸದೇ ಕಾರಿನ ರೇಡಿಯೋ ಚಾನೆಲ್ಲು ಬದಲಿಸತೊಡಗಿದ. ಎಲ್ಲ ಚಾನೆಲ್ಲುಗಳಲ್ಲಿ ಕಾಡ್ಗಿಚ್ಚಿನದೇ ಸುದ್ದಿ. ಇನ್ನೂ ಸ್ವಲ್ಪ ಹೊತ್ತಿನಲ್ಲಿ ಬೆಂಕಿ ವೃದ್ಧಾಶ್ರಮವನ್ನೂ ತಲುಪುವ ಸಾಧ್ಯತೆ ಇದೆ, ಆಗಲೇ ಎಲ್ಲರನ್ನೂ ಸುರಕ್ಷಿತ ಜಾಗಗಳಿಗೆ ಒಯ್ಯಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಿದ್ದರು. ಇನ್ನರ್ಧ ಗಂಟೆಯಲ್ಲಿ ಅದೇ ಊರಿನ ನೂರಿಪ್ಪತ್ತು ಮನೆಗಳನ್ನು ಖಾಲಿ ಮಾಡಬೇಕಾಗಿತ್ತು ಅಥವಾ ಖಾಲಿಯಾದವೆಂದು ಖಾತ್ರಿ ಪಡಿಸಿಕೊಳ್ಳಬೇಕಿತ್ತು. ಸಾಕುಪ್ರಾಣಿಗಳನ್ನು ಕರೆದೊಯ್ಯುವ ಹಟ ಮಾಡುತ್ತಿದ್ದವರ, ಆಗಲೇ ಪ್ರಾಣದ ಮೇಲೆ ಆಸೆಬಿಟ್ಟು ಹಾತೆಯಂತೆ ಬೆಂಕಿಯನ್ನು ಸ್ವಾಗತಿಸಲು ಹಾತೊರೆದು ನಿಂತವರ ಮನವೊಲಿಸಬೇಕಾಗಿತ್ತು. ಬೆಂಕಿ ಹುಟ್ಟಿಸುವ ಸಾವಿನ ಭಯ ಅಥವಾ ಬಲೆಯೆಂದೇ ಹೇಳಬಹುದೇನೋ, ಆ ವಿವರಗಳನ್ನು ಕೇಳುವ ಮನಸ್ಸು ಅವನಿಗೂ ಇರಲಿಕ್ಕಿಲ್ಲ, ಅಥವಾ ನನಗೆ ಕೇಳಲು ಕಷ್ಟವಾಗುತ್ತದೆಂದು ತಿಳಿದನೋ, ಹಾಡುಗಳನ್ನು ಹಾಕಿದ. ಅವುಗಳನ್ನು ಕೇಳಲಾಗಲಿಲ್ಲ. ಕುದಿಯುತ್ತಿದ್ದ ರಕ್ತವನ್ನು ಒಮ್ಮೆಲೇ ಹೆಪ್ಪುಗಟ್ಟಿಸುವ ವಿಡಂಬನೆಯಿಂದ ಅವು ಇನ್ನೂ ಕಠೋರವಾಗಿದ್ದವು. ರೇಡಿಯೋ ನಿಲ್ಲಿಸಿದ. ಆಗ ಹುಟ್ಟಿದ ಮೌನ ಅರೆಕ್ಷಣ ನೆಮ್ಮದಿ ತಂದರೂ ಅದೂ ಅಸಹನೀಯವೆನಿಸಿತು.

'ಸುತ್ತ ಕಾಣುತ್ತಿರುವುದು ಹೊಗೆಯೋ ಅಥವಾ ನನಗೇ ಹಾಗನ್ನಿಸುತ್ತಿದೆಯೇ? ಪೂರ್ತಿಯಾಗಿ ಹೊರಬೀಳಲು ಇನ್ನೂ ಎಷ್ಟು ಹೊತ್ತು ಬೇಕು?' ಎಂದು ಕೇಳಿದೆ.

'ಹೂಂ ಅಜ್ಜಿ, ಆ ಹೊಗೆ ಮತ್ತು ಸುಟ್ಟ ವಾಸನೆ ಬೀಸುವ ಗಾಳಿಗೆ ಈ ಕಡೆ ಬರ್ತಾ ಇದೆ. ಆದರೆ ಕಡಿಮೆ ಆಗ್ತಾ ಇದೆ. ಬಹಳ ದೂರ ಇಲ್ಲ, ಆದರೆ ಟ್ರಾಫಿಕ್ಕು; ಎಲ್ಲರೂ ಬೆಂಕಿಯಿಂದ ನಮ್ಮಂತೆ ಓಡುತ್ತಿರುವವರೇ. GPS ಇನ್ನೂ ಅರ್ಧ ಗಂಟೆ ಇದೆ ಅಂತಾ ಇದೆ. ಸ್ವಲ್ಪ ಹೊತ್ತಲ್ಲಿ ಸುರಕ್ಷಿತ ಜಾಗಕ್ಕೆ ಹೋಗಿಮುಟ್ಟೇವಿ' ಅವನ